ಹೋಗಿ ಬರುವ ಐದು ಅಡಿಯ ಕ್ಷುಲ್ಲಕ ಮನುಷ್ಯರನ್ನು ತಾತ್ಸಾರದಲ್ಲಿ ನೋಡುತ್ತವೆ. ಇನ್ನಷ್ಟು ಮತ್ತಷ್ಟು ಎತ್ತರಕ್ಕೆ ಏರಲಿರುವ ಸೌಧಗಳ ಸುತ್ತ ನಿಂತ ಗಗನಚುಂಬಿ ಕ್ರೇನ್ ಯಂತ್ರಗಳು ಬೆಂಗಳೂರಿನ 'ಡೆವಲಪ್‌ಮೆಂಟ್' ಹೊಣೆಯ ಮಣಭಾರ ಹೊತ್ತಿದ್ದರೆ, ತನ್ನಲ್ಲಿ ಸವಾರಿ ಮಾಡುವವರನ್ನು ಆತ್ಮೀಯವಾಗಿ ನಿರಾಯಾಸವಾಗಿ ಬಳುಕಿ ತಳುಕಿ ಗುರಿ ತಲುಪಿಸುವ ಆಧುನಿಕ ಮೆಟ್ರೋಗಳು ನಗರ ಸಂಚಾರ ವ್ಯವಸ್ಥೆಯ ಕಣ್ಮಣಿಯಾಗಿ ಒಂದೇ ಹದದಲ್ಲಿ ಹಿಂದೆ ಮುಂದೆ ಸಾಗುತ್ತವೆ.

ಮುಖ್ಯ ಬೀದಿಗಳ ದಿನಚರಿಯ ಗಿಜಿಗಿಜಿ ಹದ್ದುಮೀರಿದ ಹೊತ್ತಲ್ಲಿ ಅಡ್ಡರಸ್ತೆಗಳಲ್ಲಿ ತರಕಾರಿ ಸೊಪ್ಪು ಮಾರುವವರ ದೂಡುಗಾಡಿಗಳ ಪ್ರವೇಶವಾಗುತ್ತದೆ. ಹಳೆ ಪಾತ್ರೆ ಕಬ್ಬಿಣಗಳನ್ನು ಕೊಳ್ಳುವ ಕೂಗಿನ ಬೀದಿನಾದ ಕೇಳಿಸುತ್ತದೆ. ಅಷ್ಟೊತ್ತು ವಿಶ್ರಾಂತಿಯಲ್ಲಿ ಹೊದ್ದು ಮಲಗಿದ್ದ ಆಲಸಿ ಮನೆಗಳ ಸಂಚಲನವನ್ನು ಹೆಚ್ಚಿಸುತ್ತವೆ. ನೀವು ಅಸಲಿ ಬೆಂಗಳೂರಿಗರು ಅಂತೆನಿಸಿಕೊಳ್ಳುವುದು ಇಲ್ಲಿನ ಮುಖ್ಯ ಬೀದಿ ಹಾಗೂ ಅಡ್ಡರಸ್ತೆಗಳ ನೇಯ್ಗೆಯ ಪರಿಚಯ ಇದ್ದಾಗ; ಕ್ಷಿಪ್ರ ಪ್ರಯಾಣದ ರಹಸ್ಯ ಮಾರ್ಗವಾಗಿ, ವಿಳಾಸ ಹುಡುಕಲು, ವ್ಯಾಪಾರ ಮಾಡಲು, ಅಲ್ಲದಿದ್ದರೆ ಆಟದ ಬಯಲಾಗಿ ಯಾವ ರಸ್ತೆಯನ್ನು ಯಾವಾಗ ಹೇಗೆ ಬಳಸಿಕೊಳ್ಳಬೇಕು ಎನ್ನುವ ಜ್ಞಾನ-ಜಾಣ್ಮೆ ಇರುವಾಗ. ಆ ಎರಡೂ ಬಗೆಯ ರಸ್ತೆಗಳಿಗೆ ಅವುಗಳದೇ ಆದ ಸಂಸ್ಕೃತಿ ಇದೆ. ಜೊತೆಯಾಗಿ ಅವು ಬೆಂಗಳೂರನ್ನು ನೇಯುತ್ತವೆ ಕಟ್ಟುತ್ತವೆ. ದಿನದಲ್ಲಿ ಮುಖ್ಯ ಹಾಗೂ ಅಡ್ಡ ರಸ್ತೆಗಳು ಎಷ್ಟು ದುಡಿದು ದಣಿದರೂ ತಡ ರಾತ್ರಿಯ ಹೊತ್ತಿಗೆ ವಿರಾಮದಲ್ಲಿ ಒರಗುತ್ತವೆ. ಮನುಷ್ಯರು, ಕಾರು, ಬೈಕು, ಗಾಡಿಗಳು ಇನ್ನೇನು ನಿದ್ರೆಯಲ್ಲಿ ಮೈಮರೆಯಬೇಕು ಎನ್ನುವಾಗ ಬೀದಿನಾಯಿಗಳು ಆ ಖಾಲಿ ರಸ್ತೆಗಳನ್ನು ಆಕ್ರಮಿಸಿ ಸಂಭಾಷಿಸುತ್ತವೆ, ಜಗಳಾಡುತ್ತವೆ. ರಾಜಧಾನಿಯ ಅಂದಿನ ಬ್ರೇಕಿಂಗ್ ಸುದ್ದಿ, ರಾಜಕೀಯ ಬಿಕ್ಕಟ್ಟುಗಳನ್ನು ಬಗೆಹರಿಸುವ ಗಹನ ಚರ್ಚೆ ಮಾಡುತ್ತವೆ. ಬೆಂಗಳೂರಿನ ಎಡೆಯಿಲ್ಲದ ವಿಸ್ಮಯ ಜೀವ ಜಗತ್ತಿನಲ್ಲಿ ತಮ್ಮದಾದ ಸ್ವೇಚ್ಛೆಯ ಕೆಲ ಗಂಟೆಗಳನ್ನು ಕಳೆಯುತ್ತವೆ. ದಿನವೂ ಅಷ್ಟಷ್ಟು ಕಾಡಿನಂತೆ ಬೆಳೆದು ಪ್ರವಾಹದಂತೆ ಹರಿಯುವ ಬೆಂಗಳೂರಿನ ಬಗ್ಗೆ ಹತಾಶವಾಗಿ ಊಳಿಡುತ್ತವೆ. ಮತ್ತೆ ಬೆಳಗಿಗೆ ಮುಂಜಾವಿನ ಹೆಜ್ಜೆ ಸಪ್ಪಳಗಳು ರಸ್ತೆಯನ್ನು ತಲುಪುವಾಗ ನೇಪಥ್ಯಕ್ಕೆ ಸರಿದು ಇನ್ನೊಂದು ದಟ್ಟ ಇರುಳನ್ನು ಕಾಯುತ್ತವೆ. ಬೆಂಗಳೂರಿನ ಹಗಲು ರಾತ್ರಿಗಳು, ಕತ್ತಲೆ ಬೆಳಕುಗಳು ನಾಟಕದ ಕಂಪನಿಯ ನಿರ್ದಿಷ್ಟ ದೇಖಾವೆಗಳಂತೆ ಬಂದು ಹೋಗುತ್ತವೆ.

ಈ ನಿತ್ಯ ಪ್ರದರ್ಶನದ ನಿಯಮಿತ ದೃಶ್ಯಗಳು ನಿಮ್ಮ ಕಣ್ಣಿಗೂ ಬೀಳುತ್ತಿದ್ದರೆ ಒಂದೋ ನೀವು ಇತ್ತೀಚೆಗೆ ಬಂದು ಹೋದ ಇಂಗ್ಲೆಂಡ್‌ನ ಆ ಮೂವರು ಸಹೋದ್ಯೋಗಿಗಳು ಆಗಿರಬೇಕು ಅಥವಾ ಈಗಷ್ಟೇ ಇಂಟರ್ವಲ್ ಅನುಭವಿಸುತ್ತಿರುವ ನಾನಾಗಿರಬೇಕು; ಎರಡೂ ಅಲ್ಲದೆ ಇದ್ದರೆ, ಬೆಂಗಳೂರಿನ ಖಾಸಾ ಕಾಯಂವಾಸಿಗಳೇ ಆಗಿರಬೇಕು. ಉದ್ಯೋಗ ಅಲ್ಲದಿದ್ದರೆ ಶಿಕ್ಷಣದ ಕಾರಣಕ್ಕೆ ಬಂದವರು ನಿಂದವರು ಅಥವಾ ಮತ್ತೆ ಸರಕಾರಿ ಕಚೇರಿ, ನ್ಯಾಯಾಲಯದ ಕೆಲಸ ಅಥವಾ ನೆಂಟರ ಮನೆಯ ಶುಭ ಸಂದರ್ಭ, ಶೋಕದ ಕಾರ್ಯಕ್ರಮ, ಪ್ರವಾಸ ಅಂತ ಅವಸರದಲ್ಲಿರುವವರು, ವಾರದ ನಂತರ ಕ್ಷಣವೂ ಇಲ್ಲಿ ಉಳಿಯದವರು; ಬೆಂಗಳೂರಿನ ಗೌಜು ಗೊಂದಲಗಳನ್ನು ಅರಗಿಸುತ್ತ, ಆಗಲೇ ಮುಗಿದ ಎಂದೂ ಮುಗಿಯದ ಕೆಲಸವನ್ನು ತರ್ಕಿಸುತ್ತ ಮರಳುತ್ತಿರುವವರು; ನೆಮ್ಮದಿಯ ಒಂದು ಹೊತ್ತಿಗೆ ಇಡೀ ಜಗತ್ತಿನ ಜೊತೆ ತೀವ್ರ ಸೆಣಸಾಟದಲ್ಲಿರುವವರು; ಇಲ್ಲಿನ ಬೀದಿ ರಸ್ತೆಗಳನ್ನು ತುಂಬಿ ಪ್ರವಹಿಸುವ ಧುಮ್ಮಿಕ್ಕುವ ಎಲ್ಲರೂ ಅಂತಹವರಲ್ಲಿ ಒಬ್ಬರು. ನೀವು ನಾನು ಅವರು ಇವರು ಯಾರೇ ಆದರೂ ಭೂಪಟದಲ್ಲಿ ಅತ್ಯಂತ ಶಾಂತ ವ್ಯವಸ್ಥಿತ ಚುಕ್ಕೆಯಾಗಿ ಕಾಣುವ ಬೆಂಗಳೂರು, ಒಳಬಂದು ನೇರ ದರ್ಶನ ಪಡೆಯುವರನ್ನು ಅಲ್ಲಿಯೇ ನಿಲ್ಲುವವರನ್ನು, ಮಧ್ಯಂತರ ವಿರಾಮ ಪಡೆಯುವರನ್ನು ಆಕಾಶದೆತ್ತರದ ತೂಗು ತೊಟ್ಟಿಲ ದೈತ್ಯ ಚಕ್ರದ ವಿವಿಧ ಸ್ಥರದಲ್ಲಿ ಕೂರಿಸಿ ಗಿರ್ರನೆ ತಿರುಗಿಸುತ್ತದೆ, ನಿಲ್ಲುತ್ತದೆ, ಇಳಿಸುತ್ತದೆ ಮತ್ತೆ ಹತ್ತಿಸಿಕೊಳ್ಳುತ್ತದೆ, ತಿರುಗಿಸುತ್ತದೆ. ಒಂದೊಂದು ತೊಟ್ಟಿಲಲ್ಲಿ ಕುಳಿತ ಒಬ್ಬೊಬ್ಬರಿಗೂ ನಿಧಾನದಿಂದ ವೇಗ ಪಡೆದು ಮತ್ತೆ ನಿಧಾನವಾಗುವಾಗ ಏರುವಾಗ ಇಳಿಯುವಾಗ ಭರ್ರನೆ ತಿರುಗುವಾಗ ಅಸ್ಪಷ್ಟ ಚಿತ್ರ ಕಾಣಿಸುತ್ತದೆ, ಚಿತ್ರವಿಚಿತ್ರ ಸದ್ದು ಕೇಳಿಸುತ್ತದೆ. ಯಾವ ಚಿತ್ರ? ಯಾವ ಸದ್ದು? ಎಲ್ಲಿನ ಜಾತ್ರೆ? ಬೆಂಗಳೂರೇ ಹೇಳಬೇಕು. ●